# ಕುವೈತ್‌ನಲ್ಲಿ 4 ನೇ ವಿಶ್ವಕನ್ನಡ ಸಂಸ್ಕೃತಿ ಸಮ್ಮೇಳನ - 2007




ಬೆಂಗಳೂರಿನ ಪ್ರೆಸ್ ಕ್ಲಬ್‌ನಲ್ಲಿ ದಿನಾಂಕ 5-7-2007 ರಂದು ಜರುಗಿದ ಪತ್ರಿಕಾಗೋಷ್ಠಿ ೪ನೇ ವಿಶ್ವಕನ್ನಡ ಸಂಸ್ಕೃತಿ ಸಮ್ಮೇಳನದ ವಿವರವನ್ನು ಹೃದಯವಾಹಿನಿ ಸಂಪಾದಕ ಹಾಗೂ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷ ಕೆ.ಪಿ.ಮಂಜುನಾಥ ಸಾಗರ್ ಮತ್ತು ಕುವೈಟ್ ಕನ್ನಡ ಕೂಟದ ಪ್ರಧಾನ ಕಾರ್ಯದರ್ಶಿ ಶ್ರೀ ವೀರೇಂದ್ರ ಬಾಬು ನೀಡಿದರು. ಗೋಷ್ಠಿಯಲ್ಲಿ ಕುವೈಟ್ ಕನ್ನಡ ಕೂಟದ ಮಾಜಿ ಅಧ್ಯಕ್ಷ ಶ್ರೀ ಸುರೇಶ ಸಾಂಸ್ಕೃತಿಕ ಸಮಿತಿ ಪ್ರಧಾನ ಕಾರ್ಯದರ್ಶಿ ಶ್ರೀ ಜಯಪ್ರಕಾಶ ರಾವ್ ಮತ್ತು ಸಲಹಾ ಸಮಿತಿ ನಿರ್ದೇಶಕ ಶ್ರೀ ಬಿ. ರಮೇಶ್‌ರವರು ಉಪಸ್ಥಿತರಿದ್ದರು.

ಹೃದಯವಾಹಿನಿ ಪತ್ರಿಕೆ, ಮಂಗಳೂರು ಮತ್ತು ಕುವೈಟ್ ಕನ್ನಡ ಕೂಟ, ಕುವೈಟ್ ಇವರು ಸಂಯುಕ್ತವಾಗಿ ಸುವರ್ಣ ಕರ್ನಾಟಕ ವರ್ಷ ಆಚರಣೆಯ ಅಂಗವಾಗಿ ನವೆಂಬರ್ 30 ಮತ್ತು ಡಿಸೆಂಬರ್ 1 ರಂದು ಎರಡು ದಿನಗಳ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನವನ್ನು ಹಮ್ಮಿಕೊಂಡಿದೆ.

ಸಮ್ಮೇಳನದಲ್ಲಿ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಕವಿಗೋಷ್ಠಿ, ಹಾಸ್ಯ ಗೋಷ್ಠಿ, ಮಾಧ್ಯಮ ಗೋಷ್ಠಿ ಹಾಗೂ ಅನಿವಾಸಿ ಕನ್ನಡಿಗರ ಗೋಷ್ಠಿ ಜರುಗಲಿವೆ. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಭರತನಾಟ್ಯ, ಜಾನಪದ ನೃತ್ಯ, ನೃತ್ಯ ರೂಪಕ, ಯಕ್ಷಗಾನ ಪ್ರದರ್ಶನಗೊಳ್ಳುವೆವು. ಕರ್ನಾಟಕ ಕಲೆ, ಮತ್ತು ಸಂಸ್ಕೃತಿ ಗಲ್ಫ್ ರಾಷ್ಟ್ರವಾದ ಕುವೈಟ್‌ನಲ್ಲಿ ಪ್ರತಿಬಿಂಬಿಸಲಿದೆ. ಈ ಹಿಂದೆ 2004 ರಲ್ಲಿ ಅಬುಧಾಬಿ 2005 ರಲ್ಲಿ ಸಿಂಗಪುರ 2006 ರಲ್ಲಿ ಬಹರೇನ್‌ನಲ್ಲಿ ಅನುಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸಮ್ಮೇಳನ ನಡೆದಿದ್ದವು. ಸಮ್ಮೇಳನ ನಡೆಯಲಿರುವ ಸಭಾಂಗಣದ ಹೊರವಲಯದಲ್ಲಿ ವಸ್ತುಪ್ರದರ್ಶನ, ಪುಸ್ತಕ ಮೇಳವನ್ನು ಏರ್ಪಡಿಸಲಾಗುವುದು. ಬೇಡಿಕೆಗೆ ಅನುಗುಣವಾಗಿ ಮಾರಾಟ ಮಳಿಗೆಗಳನ್ನು ನಿರ್ಮಿಸ ಲಾಗುವುದು. ಉದ್ಯಮಿಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶನ ಮಾಡಲು ಅವಕಾಶವಿದೆ. ಕುವೈಟ್‌ನಲ್ಲಿ 30,000ಕ್ಕೂ ಹೆಚ್ಚು ಕನ್ನಡಿಗರಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ಸಮ್ಮೇಳನದಲ್ಲಿ ಭಾಗವಹಿಸುವಂತೆ ಪ್ರಚಾರ ನೀಡಲಾಗುವುದು.

ಕುವೈಟ್ ಕನ್ನಡ ಕೂಟದ ಕಾರ್ಯಕಾರಿ ಸಮಿತಿಯು ಸಮ್ಮೇಳನದ ಸಂಘಟನಾ ಸಮಿತಿಯಾಗಿ ಕಾರ್ಯ ನಿರ್ವಹಿಸಲಿದೆ.

**ಸಂಘಟನಾ ಸಮಿತಿ :** ಅಧ್ಯಕ್ಷರು ಶ್ರೀ ಸುಧಾಕರ್ ಶೆಟ್ಟಿ, ಉಪಾಧ್ಯಕ್ಷರು ಶ್ರೀ ಕೇಶವ ಭಟ್, ಪ್ರಧಾನ ಕಾರ್ಯದರ್ಶಿ ಶ್ರೀ ವೀರೇಂದ್ರ ಬಾಬು, ಖಜಾಂಚಿ ಶ್ರೀ ಪ್ರಶಾಂತ್ ಶೆಟ್ಟಿ, ಕಾರ್ಯ ದರ್ಶಿಗಳು : ಶ್ರೀ ವಿಜಯ್ ವಿಕ್ಟರ್ ಮತ್ತು ಶ್ರೀ ಕಾರ್ತಿಕ್ ಜಗನ್ನಾಥ್

ನ. 30 ರ ಬೆಳಿಗ್ಗೆ ನೆರವೇರಲಿರುವ ಉದ್ಘಾಟನಾ ಸಮಾರಂಭದ ಗಣ್ಯರನ್ನಾಗಿ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ, ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಮುಂತಾದ ಪ್ರಸಿದ್ಧ ವ್ಯಕ್ತಿಗಳನ್ನು ಆಮಂತ್ರಿಸ ಲಾಗುವುದು.

ಡಿ. 1 ರಂದು ಸಂಜೆ ಜರುಗಲಿರುವ ಸಮಾರೋಪ ಸಮಾರಂಭದ ಗಣ್ಯರಾಗಿ ಕೇಂದ್ರ ಸಚಿವರಾದ ಶ್ರೀ ಆಸ್ಕರ್ ಫರ್ನಾಂಡಿಸ್, ರಾಜ್ಯದ ಉಪ ಮುಖ್ಯಮಂತ್ರಿ, ಹೆಸರಾಂತ ಗಾಯಕ ಎಸ್.ಪಿ. ಬಾಲ ಸುಬ್ರಹ್ಮಣ್ಯಂ ಮುಂತಾದ ಮಹನೀಯರನ್ನು ಆಮಂತ್ರಿಸ ಲಾಗುವುದು. ಕರ್ನಾಟಕಮತ್ತು ಭಾರತದ ಇತರ ಭಾಗಗಳಿಂದ ಸುಮಾರು 100 ಕ್ಕೂ ಹೆಚ್ಚು ಸದಸ್ಯರ ಸಾಂಸ್ಕೃತಿಕ ನಿಯೋಗ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದೆ. ಅರಬ್ ರಾಷ್ಟ್ರಗಳಾದ ಕತಾರ್, ಬಹರೇನ್, ಅಬುಧಾಬಿ, ದುಬೈ, ಶಾರ್ಜ ಮತ್ತು ಮಸ್ಕತ್ ದೇಶಗಳ ಕನ್ನಡ ಸಂಘಗಳ ಸಾಂಸ್ಕೃತಿಕ ತಂಡಗಳು ಸಮ್ಮೆಳನದಲ್ಲಿ ಪಾಲ್ಗೊಳ್ಳಲಿವೆ. ಸಿಂಗಾಪುರ, ಇಂಗ್ಲೆಂಡ್, ಅಮೇರಿಕ, ಕೆನಡಾ, ಕೀನ್ಯ ಮುಂತಾದ ದೇಶಗಳ ಅನಿವಾಸಿ ಕನ್ನಡಿಗರು ಸಮ್ಮೆಳನದಲ್ಲಿ ಭಾಗವಹಿ ಸಲಿರುವರು.

**ವಿಶೇಷ ಸಂಚಿಕೆ :** ಹೃದಯವಾಹಿನಿಯು 4 ನೇ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನದ ಅಂಗವಾಗಿ ವಿಶೇಷ ಸಂಚಿಕೆಯನ್ನು ಹೊರತರಲಿದ್ದು, ಲೇಖಕರ ಅಂತರಾಷ್ಟ್ರೀಯ ಬಾಂಧವ್ಯ ಬಿಂಬಿಸುವ ಲೇಖನ ಕವನಗಳಿಗೆ ಆದ್ಯತೆ ನೀಡಲಾಗುವುದು. ಕಥೆ, ಹಾಸ್ಯ ಲೇಖನ ಮತ್ತು ವೈಚಾರಿಕ ಲೇಖನಗಳನ್ನು ಕಳುಹಿಸಬಹುದು. ಅನಿವಾಸಿ ಕನ್ನಡಿಗರು hrudayavahini@yahoo.co.in ಈ ಇ-ಮೇಲ್‌ಗೆ ರವಾನಿಸ ಬಹುದು.

**ಸಮ್ಮೇಳನಾಧ್ಯಕ್ಷರು :** ಸುವರ್ಣ ಕರ್ನಾಟಕದ ವರ್ಷಚರಣೆಯ ಅಂಗವಾಗಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರ ಗಳೊಂದರಲ್ಲಿ ಗಣನೀಯ ಸೇವೆಸಲ್ಲಿಸಿರುವ ಮಹನೀಯ ರೋರ್ವರನ್ನು ಸಮ್ಮೆಳನಾಧ್ಯಕ್ಷರಾಗಿ ಆಯ್ಕೆ ಮಾಡಲಾಗುವುದು.

**ಪ್ರಶಸ್ತಿ :** ಹೃದಯವಾಹಿನಿ ಪತ್ರಿಕೆಯು ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನದ ಅಂಗವಾಗಿ ಪ್ರತಿ ವರ್ಷದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಕಲಾವಿದರು, ಸಾಹಿತಿಗಳು, ವೈದ್ಯರು, ತಂತ್ರಜ್ಞರು ಹಾಗೂ ಸಮಾಜ ಸೇವಕರಿಗೆ ವಿಶ್ವಮಾನ್ಯರು – 2006 (Globalman – 2006) ಪ್ರತಿಷ್ಠಿತ ಅಂತರಾಷ್ಟ್ರೀಯ ಪ್ರಶಸ್ತಿಯನ್ನು ಸಮ್ಮೆಳನದ ಸಮಾರೋಪ ಸಮಾರಂಭದಲ್ಲಿ ಪ್ರದಾನ ಮಾಡಿ ಗೌರವಿಸಲಿದೆ.

ಸಮ್ಮೇಳನದಲ್ಲಿ ಭಾಗವಹಿಸಲಿಚ್ಚಿಸುವವ ಕಲಾವಿದರು, ಸಾಹಿತಿಗಳು ಹಾಗೂ ಪ್ರಶಸ್ತಿಗೆ ಹೆಸರು ಸೂಚಿಸುವವರು "ಸಂಪಾದಕರು, ಹೃದಯವಾಹಿನಿ ಪತ್ರಿಕೆ, ಮಂಜುನಾಥ್ ಅಸೋಸಿಯೇಟ್ಸ್, ರಘು ಬಿಲ್ಡಿಂಗ್, ಉರ್ವಾಸ್ಟೋರ್, ಮಂಗಳೂರು – 06" ಈ ವಿಳಾಸಕ್ಕೆ ಜುಲೈ 25 ರೊಳಗೆ ವಿವರಗಳನ್ನು ಕಳುಹಿಸಬಹುದು. ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0824 – 2455209, 9343343239

## ಬಹುಮುಖ ಪ್ರತಿಭೆಯ ನೃತ್ಯ ಕಲಾವಿದೆ ಸುಚೇತನಾ ನಾಯಕ್



ಪ್ರಕೃತಿಯ ಮಡಿಲಿನಲ್ಲಿರುವ ಬನವಾಸಿ, ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಪುಟ್ಟ ಗ್ರಾಮ.

ಇತಿಹಾಸದ ಪುಟಗಳನ್ನು ತೆರೆದರೆ ಇದು ರಾಜಕೀಯ ಮತ್ತು ಸಾಂಸ್ಕೃತಿಕ ಮಹತ್ವದ ಸ್ಥಳ ಎಂಬುದನ್ನು ಗಮನಿಸಬಹುದು. ನಾಲ್ಕನೇ ಶತಮಾನದಲ್ಲಿ ಕದಂಬರ ರಾಜಧಾನಿಯಾಗಿದ್ದ ಬನವಾಸಿ ಪಾಂಡವರು ವನವಾಸ ಮಾಡಿದ ಸ್ಥಳವೂ ಆಗಿತ್ತೆಂಬ ಪುರಾಣ ಪ್ರಸಿದ್ಧಿಯನ್ನು ಪಡೆದಿದೆ.

ಕನ್ನಡದ ಆದಿಕವಿ ಪಂಪನ ಕಾವ್ಯ ಪ್ರೇರಣೆಯ ತಾಣವೂ ಆಗಿದ್ದುದರಿಂದ ಪಂಪ ತನ್ನ ಕಾವ್ಯದಲ್ಲಿ 'ಆರಂಕುಶವಿಟ್ಟೊಡೆ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂದು ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದು.

ಪಂಪನ ನೆಚ್ಚಿನ ಸ್ಥಳವಾಗಿದ್ದ ಕಾರಣ ಕರ್ನಾಟಕ ಸರ್ಕಾರ ಪ್ರತಿವರ್ಷ ಇಲ್ಲಿ ಕದಂಬೋತ್ಸವ ನಡೆಸಿ ಪಂಪನ ಹೆಸರಿನ ಪ್ರತಿಷ್ಠಿತ ಪ್ರಶಸ್ತಿಯನ್ನು ಸಾಹಿತಿಗಳಿಗೆ ನೀಡುತ್ತಿದೆ. ಅದರಂತೆ ಈ ಬಾರಿಯ ಕದಂಬೋತ್ಸವ ಎಪ್ರಿಲ್ ತಿಂಗಳ 7 ಮತ್ತು 8ರಂದು ನಡೆಯಿತು. ಎರಡು ದಿನಗಳ ಈ ಉತ್ಸವದಲ್ಲಿ ಸಂಗೀತ, ನೃತ್ಯ, ನಾಟಕ, ಜಾನಪದ ಮತ್ತಿತರ ಕಲಾ ಪ್ರಕಾರಗಳ ದೃಶ್ಯ ವೈಭವವೇ ನಡೆಯುತ್ತದೆ.

ವೀಕ್ಷಕರಿಗಂತೂ ಈ ಹಬ್ಬವನ್ನು ಸವಿದಷ್ಟೂ ಸಾಲದೆಂಬಂತೆ ರಸದೌತಣದ ಸುರಿಮಳೆಯೇ ಇರುತ್ತದೆ.

**'ಬಹುಮುಖ ಪ್ರತಿಭೆಯ ಸುಚೇತನಾ ನಾಯ್ಕ' :**

ಪತ್ರಕರ್ತೆ ಹಾಗೂ ನೃತ್ಯ ಕಲಾವಿದೆ ಸುಚೇತನಾ ನಾಯ್ಕ ಅವರು ಭರತನಾಟ್ಯ ಹಾಗೂ ಆಂಧ್ರ ಶೈಲಿಯ ಕೂಚುಪುಡಿ ನೃತ್ಯದ ಮೂಲಕ ಪ್ರೇಕ್ಷಕರ ಗಮನ ಸೆಳೆದರು. ತಮ್ಮ ಪ್ರೌಢ ಅಭಿನಯದ ಮೂಲಕ ಭರವಸೆಯ ಕಲಾವಿದೆ ಎಂಬುದನ್ನು ಅವರು ಸಾಬೀತುಪಡಿಸಿದರು.

ಇಡೀ ಉತ್ಸವದ ಕೆಲವೇ ಅತ್ಯುತ್ತಮ ಕಾರ್ಯಕ್ರಮಗಳಲ್ಲಿ ತಮ್ಮ ನೃತ್ಯವೂ ಒಂದು ಎಂಬುದನ್ನು ವೀಕ್ಷಕರಿಗೆ ಮನದಟ್ಟು ಮಾಡುವಲ್ಲಿ ಸುಚೇತನಾ ಯಶಸ್ವಿಯಾದರು.

ಶಿರಸಿಯಂತಹ ಮಲೆನಾಡು ಭಾಗದ ಅಪ್ಪಟ ಪ್ರತಿಭೆ ಸುಚೇತನಾ ಶಿಕ್ಷಣದಲ್ಲಿ ಸಾಧನೆ ಮಾಡಿದ್ದಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎ. ಪದವಿಯಲ್ಲಿ ಪ್ರಥಮ ರ್‍ಯಾಂಕ್ ಪಡೆಯುವ ಮೂಲಕ ಚಿನ್ನದ ಪದಕ ಗಳಿಸಿದ್ದಾರೆ. ಅದೇ ವಿಶ್ವವಿದ್ಯಾಲದ ಕಾನೂನು ಪದವೀಧರೆಯೂ ಆಗಿದ್ದಾರೆ.

ಭರತನಾಟ್ಯ ಮತ್ತು ತಬಲವಾದನದಲ್ಲಿ ಪ್ರೌಢ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಅವರು ದೆಹಲಿ, ಹೈದರಾಬಾದ್ ಮತ್ತಿತರ ಕಡೆಗಳಲ್ಲಿ ನೃತ್ಯ ಪ್ರದರ್ಶನ ನೀಡಿದ್ದಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಆರ್ಯ ಈಡಿಗ ಮಹಿಳಾ ಸಂಘದ ವಾರ್ಷಿಕೋತ್ಸವದಲ್ಲಿಯೂ ಅವರು ಭರತನಾಟ್ಯ ಪ್ರದರ್ಶಿಸಿ ಪ್ರೇಕ್ಷಕರ ಮನಸೂರೆಗೊಂಡಿದ್ದರು.



ಶಿರಸಿಯ ಡಿ.ಎಸ್. ನಾಯಕ್ ಮತ್ತು ಶ್ರೀಮತಿ ಸವಿತಾ ನಾಯಕ್ ಅವರ ಪುತ್ರಿಯಾದ ಸುಚೇತನಾ ಕಳೆದ ಕೆಲವು ವರ್ಷಗಳಿಂದ 'ಪ್ರಜಾವಾಣಿ' ಪತ್ರಿಕೆಯಲ್ಲಿ ಹೈಕೋರ್ಟ್ ವರದಿಗಾರ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದು ಹಲವಾರು ವಿಶೇಷ ಲೇಖನಗಳನ್ನು ಬರೆದಿದ್ದಾರೆ.

ಅಲ್ಪಕಾಲದ ಅವರ ಸಾಧನೆಯನ್ನು ಗಮನಿಸಿದರೆ ಇನ್ನಷ್ಟು ಅವಕಾಶಗಳು ದೊರೆತಲ್ಲಿ ಮುಂದೆ ಅವರು ದೊಡ್ಡ ಕಲಾವಿದೆಯಾಗುವಷ್ಟರಲ್ಲಿ ಯಾವುದೇ ಸಂಶಯವಿಲ್ಲ.